SC:5/2024
PW:06 CW:20

ಕರ್ನಾಟಕ ಸರ್ಕಾರ (ಸಿ.ಆರ್.ಪಿ67)

ಹೇಳಿಕೆ ಹಾಳೆ
ಆರ್.ಪಿ. ಸಂಖ್ಯೆ57
ನಮೂನೆ ಸಂಖ್ಯೆ4
(ಸಿವಿಲ್)

## 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆ: 5/2024

| | |
|---|---|
| PW | 06 |
| CW | 20 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಬೋಧನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 24.07.2026.

| | | |
|---|---|---|
| ಸಾಕ್ಷಿಯ ಹೆಸರು | : | ವಿ. ನಾರಾಯಣಸ್ವಾಮಿ |
| ತಂದೆಯ ಹೆಸರು | : | ಲೇಟ್. ವೆಂಕಟರಾಯಪ್ಪ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ಎ.ಎಸ್ . ಐ , ಬಾಗೇಪಲ್ಲಿ ಪೊಲೀಸ್ ಠಾಣೆ |
| ವಾಸಸ್ಥಳ | : | ಬಾಗೇಪಲ್ಲಿ |

**ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:**

ನಾನು 2021 ರಿಂದ ಇಲ್ಲಿಯವರೆಗೆ ಬಾಗೇಪಲ್ಲಿ ಎ.ಎಸ್.ಐ ಯಾಗಿ ಕರ್ತವ್ಯ ಮಾಡುತ್ತಿರುತ್ತೇನೆ .

2. ದಿ: 31.05.2022 ರಂದು ಚಾಸಾ.19 ರವರು ಸೇವೆಯಿಂದ ವಯೋನಿವೃತ್ತಿ ಹೊಂದಿದ್ದು ಮುಂದಿನ ತನಿಖೆಯನ್ನು ನಾನು ಕಡತಗಳೊಂದಿಗೆ ಪಡೆದುಕೊಂಡಿರುತ್ತೇನೆ. ದಿ: 25.07.2022 ರಂದು ಕೆ ಇ ಬಿ ಬಾಗೇಪಲ್ಲಿ ರವರಿಂದ ಮೃತ ನಿರ್ಮಲ ವಾಸವಾಗಿದ್ದ ಮನೆಯ ವಿದ್ಯುತ್ ಬಿಲ್ಲನ್ನು ಪಡೆದುಕೊಂಡಿರುತ್ತೇನೆ . ಸದರಿ ಬಿಲ್ಲನ್ನು ನೋಡುತ್ತಿದ್ದು ಅದನ್ನು ನಿಪಿ.12 ಎಂದು , ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ.12 (ಎ) ಎಂದು

ಗುರುತಿಸಲಾಯಿತು. ದಿಃ09.09.2022 ರಂದು ಬಾಗೇಪಲ್ಲಿ ಸರ್ಕಾರಿಯ ಆಸ್ಪತ್ರೆಯ ವೈದ್ಯರಿಂದ ಚಾಸಾ.17 ರವರು ಶವಪರೀಕ್ಷೆಯ ವರದಿಯನ್ನು ಪಡೆದು ತಂದು ಹಾಜರುಪಡಿಸಿದ್ದು ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ . ಶವಪರೀಕ್ಷೆ ವರದಿಯನ್ನು ಈಗಾಗಲೇ ನಿಪಿ.8 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.8 (ಎ) ಎಂದು ಗುರುತಿಸಲಾಯಿತು. ನಂತರ ತನಿಖೆ ಮುಕ್ತಾಯಗೊಂಡಿದ್ದರಿಂದ 1 ಮತ್ತು 2 ನೇ ಆರೋಪಿತರ ವಿರುದ್ಧ ಆರೋಪ ಸಾಬೀತಾಗಿದ್ದರಿಂದ ಅವರುಗಳು ಭಾ.ದಂಕಲಂ.498(ಎ), 306 ಸಹಕಲಂ.304 ರಡಿಯಲ್ಲಿ ಅಪರಾಧ ಎಸೆಗಿರುತ್ತಾರೆ ಎಂದು ಅವರ ವಿರುದ್ಧ ದೋ. ಪಟ್ಟಿ ಸಲ್ಲಿಸಿರುತ್ತೇನೆ .

**<u>ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಶ್ರೀ ಹೆಚ್.ಆರ್.ವಿ ವಕೀಲರಿಂದಃ</u>**

3. ನಿಪಿ.12 ರಲ್ಲಿ ಲಕ್ಷ್ಮೀದೇವಿ ಇವರ ಹೆಸರು ಇದ್ದು ಅವರ ಬಗ್ಗೆ ವಿಚಾರಣೆ ಮಾಡಿರುತ್ತೇನೆ . ಕೆ ಇ ಬಿ ಬಿಲ್ಲಿನ ಕುರಿತು ವಿಚಾರಣೆ ಮಾಡಿದ್ದು, ಲಕ್ಷ್ಮೀ ದೇವಿಯವರನ್ನು ಕರೆಯಿಸಿ ವಿಚಾರಣೆ ಮಾಡಿರುವುದಿಲ್ಲ . ಚಾಸಾ.19 ರವರು ತನಿಖೆ ಮಾಡಿದ ಕಡತಗಳನ್ನು ಪರಿಶೀಲನೆ ಮಾಡಿರುತ್ತೇನೆ . ಮೃತಳ ಡೆತ್ ನೋಟ್ ಗೆ ಸಂಬಂಧಿಸಿದಂತೆ ಡೆತ್ ನೋಟ್ ನಲ್ಲಿ ಇರುವ ಅಕ್ಷರಗಳು ಮೃತ ಕೈ ಬರಹಗಳು ಎನ್ನುವುದರ ಬಗ್ಗೆ ಎಫ್ ಎಸ್ ಎಲ್ ವರದಿ ಬಂದಿರುತ್ತದೆ . ಆದ್ದರಿಂದ ಬೇರೆ ಸಾಕ್ಷಿದಾರರಿಂದ ಗುರುತಿಸಿರುವುದಿಲ್ಲ. ನನ್ನ ತನಿಖೆಯಲ್ಲಿ ಮೃತಳ ಹಸ್ತಾಕ್ಷರ ಇರುವ ಬೇರೆ ದಾಖಲೆಯನ್ನು ನಾನು ಪಡೆದುಕೊಂಡಿರುವುದಿಲ್ಲ ಆದರೆ ನನ್ನ ಹಿಂದಿನ ತನಿಖಾಧಿಕಾರಿ ಪಡೆದುಕೊಂಡಿರುತ್ತಾರೆ . ಮೃತಳು ಕೈ ಬರಹ ಇರುವ ಬೇರೆ ದಾಖಲೆಯನ್ನು ದೋ. ಪಟ್ಟಿಯೊಂದಿಗೆ ನಾನು ಹಾಜರುಪಡಿಸಿರುವುದಿಲ್ಲ. ಚಾಸಾ.19 ರವರು ಪಡೆದುಕೊಂಡಂತಹ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರಲಿಲ್ಲ . ಮೃತಳ ಕೈ ಬರಹ ಇರುವ ಬೇರೆ ದಾಖಲೆಯನ್ನು ಹಾಗೂ ಮೃತಳ ಡೆತ್ ನೋಟ್ ನ್ನು ಎಫ್ ಎಸ್ ಎಲ್ ಗೆ ತಜ್ಞರ ಪರೀಕ್ಷೆಗಾಗಿ ಕಳುಹಿಸಿದ ಬಗ್ಗೆ ದಾಖಲೆಯನ್ನು ದೋ.ಪಟ್ಟಿಯ ಜೊತೆಗೆ ಹಾಜರುಪಡಿಸಿರುವುದಿಲ್ಲ . ಮೃತಳು ಡೆತ್ ನೋಟನ್ನು ಬರೆದು ಇಟ್ಟಿದ್ದಳು ಎಂದು ಸುಳ್ಳು ಹೇಳುತ್ತಿದ್ದೇವೆ ಮತ್ತು ಮೃತಳಿಗೆ ಸೇರಿದ ಯಾವುದೇ ಡೆತ್ ನೋಟ್

ಇಲ್ಲದೇ ಇರುವುದರಿಂದ ನಾವು ಎಫ್ ಎಸ್ ಎಲ್ ಗೆ ಕಳುಹಿಸಿದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಮೃತ ನಿರ್ಮಲ ವಾಸವಾಗಿದ್ದ ಮನೆಯಲ್ಲಿ ಒಟ್ಟು 3 ಜನ ಅಂದರೆ ಆರೋಪಿತರು ಮತ್ತು ನಿರ್ಮಲ ವಾಸವಾಗಿದ್ದರು ಎಂದು ನಮ್ಮ ತನಿಖೆಯಲ್ಲಿ ಕಂಡು ಬಂದಿರುತ್ತದೆ . ಮೃತ ನಿರ್ಮಲ ಮತ್ತು 1 ಮತ್ತು 2 ನೇ ಆರೋಪಿತರು 3 ಜನ ಒಟ್ಟಿಗೆ ಸೇರಿ ಒಂದೇ ಮನೆಯಲ್ಲಿ ವಾಸ ಇದ್ದರು ಎಂದು ಯಾವ ಸಾಕ್ಷಿದಾರರು ಹೇಳಿಕೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ .

4. ಡೆತ್ ನೋಟ್ ನಲ್ಲಿ ಬರೆದಿರುವ ಶೇಖರ್ ಎಂಬ ವ್ಯಕ್ತಿಯ ಬಗ್ಗೆ ನಾನು ತನಿಖೆ ಮಾಡಿರುವುದಿಲ್ಲ. 1 ಮತ್ತು 2 ನೇ ಆರೋಪಿತರಿಗೂ ಮತುತ ಮೃತಳ ಸಾವಿಗೂ ಯಾವುದೇ ಸಂಬಂದಿಧ ಇಲ್ಲ ಎಂದು ನನ್ನ ತನಿಖೆಯಲ್ಲಿ ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ . ಮೃತಳ ಸಾವಿಗೆ ಅವರ ಪೋಷಕರೇ ಕಾರಣ ಇರುತ್ತಾರೆ ಎಂದು ಮತ್ತು ಅವರುಗಳ ನಡುವಿನ ಜಗಳವೇ ಮೃತಳ ಸಾವಿಗೆ ಕಾರಣ ಎಂದು ನನ್ನ ತನಿಖೆಯಲ್ಲಿ ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ . ಮೃತಳ ಡೆತ್ ನೋಟ್ ನಲ್ಲಿ ಬರೆದಿರುವ ಮಕ್ಕಳ ಬಗ್ಗೆ ಯಾರು ಇರುತ್ತಾರೆ ಮತ್ತು ಎಷ್ಟು ವಯಸ್ಸಿನವರು ಇರುತ್ತಾರೆ ಮತ್ತು ಎಲ್ಲಿ ಇದ್ದರು ಎಂಬ ಬಗ್ಗೆ ನಾನು ತನಿಖೆ ಮಾಡಿರುವುದಿಲ್ಲ . ಆ ರೀತಿ ತನಿಖೆ ಮಾಡಲು ನನಗೆ ತೊಂದರೆ ಇರಲಿಲ್ಲ .

**<u>ಮರುವಿಚಾರಣೆಃ</u> ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ** 24.07.2026 **ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು** )

ಓದಿ ಹೇಳಿ ಕೇಳಿ ಸರಿ ಇದೆ

Sd/-

**(ಸಿದ್ದಣ್ಣ.ಬಿ.ಹಂದ್ರಾಳ)**
ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.